## ಏಳನೆಯ ತರಗತಿ – ಪ್ರಥಮ ಭಾಷೆ ಕನ್ನಡ

## ಶಿಕ್ಷಕರಿಗೆ ಸೂಚನೆಗಳು

**ಆತ್ಮೀಯ ಶಿಕ್ಷಕ ಬಂಧುಗಳೇ,**

2020-21 ನೇ ಶೈಕ್ಷಣಿಕ ಸಾಲಿನಲ್ಲಿ ಆರನೇ ತರಗತಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಕೋವಿಡ್ - 19 ಹಿನ್ನೆಲೆಯಿಂದಾಗಿ ಐದನೇ ತರಗತಿ ಅಂತ್ಯದಲ್ಲಿ ಯಾವುದೇ ಮೌಲ್ಯಮಾಪನಕ್ಕೂ ಒಳಪಡದೆ, ಆರನೇ ತರಗತಿಗೆ ಪ್ರವೇಶ ಪಡೆದಿದ್ದು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗೆ ಆಗಮಿಸದೆ ಆರನೇ ತರಗತಿಗೆ ನೇರವಾಗಿ ಪ್ರವೇಶ ಪಡೆದಿರುತ್ತಾರೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು 2021-22ನೇ ಶೈಕ್ಷಣಿಕ ಸಾಲಿನಲ್ಲಿ 30 ದಿನಗಳ ಸೇತುಬಂಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

30 ದಿನಗಳ ಬಂಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಶಿಕ್ಷಕರು ಈ ಕೆಳಕಂಡ ಪೂರ್ವಸಿದ್ಧತೆಗಳೊಂದಿಗೆ ತರಗತಿಯನ್ನು ನಿರ್ವಹಿಸುವ ಮೂಲಕ ಸೇತುಬಂಧವನ್ನು ಯಶಸ್ವಿ ಗೊಳಿಸಲು ಸಾಧ್ಯವಾಗುತ್ತದೆ.

- ಸೇತುಬಂಧ ಸಾಹಿತ್ಯದಲ್ಲಿ ನೀಡಿರುವ ಚಟುವಟಿಕೆಗಳ ಪಟ್ಟಿ ಒಂದು ಮಾದರಿಯಾಗಿದ್ದು, ಶಿಕ್ಷಕರು ಸರಳ / ಪೂರಕ / ಸ್ಥಳೀಯ ಅಗತ್ಯ ಚಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
- ಸಾಹಿತ್ಯವನ್ನು ಓದಿದ ಶಿಕ್ಷಕರು ದಿನಕ್ಕೊಂದು ಚಟುವಟಿಕೆಯನ್ನು ತರಗತಿಯಲ್ಲಿ ಅನುಷ್ಠಾನಗೊಳಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸಲು ಅಗತ್ಯವಾದ ಮಿಂಚು ಪಟ್ಟಿಗಳು, ಗಾದೆಗಳು, ಚಿತ್ರಕಥಾ ಸರಣಿಗಳು, ಸನ್ನಿವೇಶದ ಕಾರ್ಡ್‌ಗಳು, ಭಿತ್ತಿ ಪತ್ರಗಳು, ಕರಪತ್ರಗಳು, ಮಾದರಿ ಪತ್ರಗಳ ಚಾರ್ಟ್ ಗಳು, ಸೂಚನಾ ಫಲಕಗಳು, ಸಣ್ಣ ಕಥೆ ಕವನಗಳನ್ನು ಸಂಗ್ರಹಿಸಿಕೊಳ್ಳುವುದು ಅಥವಾ ಸಿದ್ಧಪಡಿಸಿಕೊಳ್ಳುವುದು.
- ಕಲಿಕಾ ಚಟುವಟಿಕೆ ಗಳ ನಿರ್ವಹಣೆಯೊಂದಿಗೆ ಮೌಲ್ಯಮಾಪನ ಕಾರ್ಯವು ಅಂತರ್ಗತವಾಗಿರುತ್ತದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

ಏಳನೆಯ ತರಗತಿ ಪ್ರಥಮ ಭಾಷೆ ಕನ್ನಡ "ಬಂಧ" ಸಾಹಿತ್ಯ

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಅಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಸಂಭಾಷಣೆ / ಸಂವಾದ ಮತ್ತು ಚರ್ಚೆಗಳನ್ನು ಅರ್ಥ ಮಾಡಿಕೊಳ್ಳುವರು. | ❖ ಅಪರಿಚಿತ ಸನ್ನಿವೇಶಗಳನ್ನು ಗ್ರಹಿಸುತ್ತಾರೆ. | 1.1 ಅನಾವರಣ<br><br>1.2 ಚಿತ್ರ ಪಟ ವೀಕ್ಷಣೆ ಮತ್ತು ಆಲಿಸುವಿಕೆ.<br>1.3 ನನ್ನ ವಿಚಾರ-ನಿನ್ನ ಗ್ರಹಿಕೆ | 1.1 ಶಿಕ್ಷಕರು ತರಗತಿಯಲ್ಲಿರುವ ಮಕ್ಕಳ ಸಂಖ್ಯೆಗನುಗುಣವಾಗಿ ರಹಸ್ಯ ಪದಗಳ ಮಿಂಚುಪಟ್ಟಿಗಳನ್ನು ಡಬ್ಬವೊಂದರಲ್ಲಿ ಹಾಕುವುದು. ವಿದ್ಯಾರ್ಥಿಗಳು ಒಬ್ಬೊಬ್ಬರಂತೆ ಬಂದು ತನಗೆ ದೊರೆತ ರಹಸ್ಯ ಪದ ಇತರರಿಗೆ ಕಾಣದಂತೆ ಓದಿ ಅರ್ಥೈಸಿಕೊಂಡು, ಆ ಪದ ಏನೆಂದು ಗುರುತಿಸಲು ಸುಳುಹುಗಳನ್ನು ನೀಡಲಿ, ಉಳಿದ ಮಕ್ಕಳು ಅದನ್ನು ಆಲಿಸಿ ಪದ ಯಾವುದೆಂದು ಹೇಳಿಸಿ.<br>ಉದಾ: ರಹಸ್ಯ ಪದ – ಊರ ಹಬ್ಬ.<br>ಮಗು ನೀಡಬಹುದಾದ ವಿವರಣೆ:- ವರ್ಷಕ್ಕೊಮ್ಮೆ ಆಚರಿಸುತ್ತೇವೆ, ನೆಂಟರು ಬರುತ್ತಾರೆ, ಊರೆಲ್ಲಾ ಸಿಂಗಾರಗೊಂಡಿರುತ್ತದೆ, ಇತ್ಯಾದಿ.<br>1.2 ಶಿಕ್ಷಕರು ವಿವಿಧ ಸನ್ನಿವೇಶಗಳ ಚಿತ್ರಪಟಗಳನ್ನು ಪ್ರದರ್ಶಿಸಿ, ಅದನ್ನು ವಿವರಿಸಿ ಮಕ್ಕಳು ಗಮನವಿಟ್ಟು ಆಲಿಸುವಂತೆ ತಿಳಿಸಿ.<br>ಉದಾ: ವಿಮಾನ ನಿಲ್ದಾಣ<br>1.3 ಮಗು ಒಂದು ಅಪರಿಚಿತ ಸನ್ನಿವೇಶಕ್ಕೆ ಸಂಬಂಧಿಸಿದಂತೆ ವಿಚಾರವನ್ನು ಹೇಳಿದಾಗ, ಬೇರೆ |

| | | | | |
|---|---|---|---|---|
| | | | | ಮಕ್ಕಳು ಅದನ್ನು ಗ್ರಹಿಸಲು ತಿಳಿಸಿ. |
| 2 | | ❖ ಚರ್ಚಿಸಿದ ವಿಷಯವನ್ನು ಇಂದಿನ ಮತ್ತು ಭವಿಷ್ಯದ ಜೀವನಾವಶ್ಯಕತೆಗಳಿಗೆ ಅನ್ವಯಿಸಿಕೊಳ್ಳುತ್ತಾರೆ. | 2.1 ಆಲಿಸು – ಅನುಸರಿಸು.<br>2.2 ವಚನ-ಚಿಂತನ<br>2.3 ಹಾಡ್ಗತೆ<br>2.4 ಸಂವಾದ | 2.1 ಶಿಕ್ಷಕರು ವಿವಿಧ ಅಪರಿಚಿತ ಸನ್ನಿವೇಶಗಳನ್ನು ನೀಡಿ ವಿದ್ಯಾರ್ಥಿಗಳು ಚರ್ಚಿಸಲು ಅವಕಾಶ ಕಲ್ಪಿಸುವುದು.<br>ಉದಾ: 1) ನಾನು ಭೂಮಿಯಾಗಿದ್ದರೆ.<br>2) ಮೊಬೈಲ್ ಬಳಕೆಯಿಂದಾಗುವ ಅನುಕೂಲ ಮತ್ತು ಅನಾನುಕೂಲಗಳು<br>2.2 ಅಕ್ಕಮಹಾದೇವಿ, ಬಸವಣ್ಣ ಮುಂತಾದ ವಚನಕಾರರ ವಚನಗಳನ್ನು ವಿದ್ಯಾರ್ಥಿಗಳು ಆಲಿಸುವಂತೆ ತಿಳಿಸಿ, ಅವುಗಳ ಒಳಾರ್ಥದ ಬಗ್ಗೆ ಅರ್ಥೈಸಿ.<br>2.3 ಹಾಡು ಸೇರಿರುವ ಕಥೆಯನ್ನು (ಹಾಡ್ಗತೆ) ಮಕ್ಕಳು ಆಲಿಸಿ ಅದರಲ್ಲಿರುವ ಉತ್ತಮ ಗುಣಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸಿ. |
| 3 | ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ? ಹಾಗಾದರೆ? ಪ್ರಶ್ನೆಗಳಿಗೆ ಉತ್ತರಿಸುವರು. | ❖ ವಿಷಯವನ್ನು ಸ್ಪಷ್ಟವಾಗಿ ಆಲಿಸುತ್ತಾರೆ. | 3.1 ಕಥೆಕೇಳು.<br>3.2 ಕನ್ನಡದ ಕೋಟ್ಯಾಧಿಪತಿ. | 3.1 ಶಿಕ್ಷಕರು ಕಥೆಯೊಂದನ್ನು ಹಾವಭಾವದೊಂದಿಗೆ ಮಕ್ಕಳಿಗೆ ರಸವತ್ತಾಗಿ ಹೇಳಿ, ಕಥೆಯಲ್ಲಿ ಮಕ್ಕಳು ಮೆಚ್ಚುವಂತಹ ಅಂಶಗಳನ್ನು ಹೇಳಿಸಿ. ಕಥೆಯಲ್ಲಿ ಬರುವ ಪಾತ್ರಗಳು ಹಾಗೂ ಸನ್ನಿವೇಶಗಳನ್ನು ಕುರಿತು ಹೇಗೆ? ಹಾಗಾದರೆ? ಪ್ರಶ್ನೆಗಳಿಗೆ ವಿದ್ಯಾರ್ಥಿಗಳು |

| | | | | |
|---|---|---|---|---|
| | | | 3.3 ಅರ್ಜುನ-ಬಬ್ರುವಾಹನರ ಮಾತುಕತೆ | ಉತ್ತರಿಸುವಂತೆ ಅನುಕೂಲಿಸಿ.<br>3.2 ದೂರದರ್ಶನದಲ್ಲಿ ಪ್ರಸಾರವಾಗುವ ರಸಪ್ರಶ್ನೆ ಕಾರ್ಯಕ್ರಮಗಳನ್ನು ತರಗತಿಗಳಲ್ಲಿ ಏರ್ಪಡಿಸುವುದು. ಅಲ್ಲಿ ಬರುವ ಪ್ರಶ್ನೆಗಳು ಹಾಗೂ ಸೂಚನೆಗಳನ್ನು ವಿದ್ಯಾರ್ಥಿಗಳು ಸರಿಯಾಗಿ ಆಲಿಸುವಂತೆ ಮಾರ್ಗದರ್ಶನ ನೀಡಿ.<br>3.3 ಧ್ವನಿ ಸುರಳಿ ಮೂಲಕ ಅರ್ಜುನ-ಬಬ್ರುವಾಹನರ ಮಾತುಕಥೆಯನ್ನು ವಿದ್ಯಾರ್ಥಿಗಳಿಗೆ ಕೇಳಿಸಿ. |
| 4 | | ❖ ನಾಟಕದಲ್ಲಿ ಬರುವ ಘಟನೆಗಳನ್ನು ಆಲಿಸಿ ಅರ್ಥೈಸಿಕೊಳ್ಳುತ್ತಾರೆ. | 4.1 ಯಾಕಾಯ್ತು? ಹೇಗಾಯ್ತು?<br>4.2 ಸಂಭಾಷಣೆ<br>4.3 ಏಕಪಾತ್ರಾಭಿನಯ | 4.1 ಶಿಕ್ಷಕರು ನಾಟಕವೊಂದನ್ನು ಧ್ವನಿಸುರುಳಿ ಮೂಲಕ ಕೇಳಿಸುವುದು. ಅದರಲ್ಲಿ ಬರುವ ಪ್ರಮುಖ ಘಟನೆಗಳ ಬಗ್ಗೆ ವಿದ್ಯಾರ್ಥಿಗಳು ಚರ್ಚಿಸಿ ಏಕೆ? ಹೇಗೆ? ಎಂಬಂತಹ ಪ್ರಶ್ನೆಗಳಿಗೆ ಆಲೋಚಿಸಿ ಉತ್ತರಿಸಲು ಅನುಕೂಲಿಸಿ.<br>ಉದಾ: ಸತ್ಯ ಹರಿಶ್ಚಂದ್ರ ನಾಟಕ. |

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 5 | ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿಖರವಾಗಿ ಮಾತನಾಡುವರು | ❖ ತಾರ್ಕಿಕ ಚಿಂತನೆ ಮತ್ತು ಸೃಜನಶೀಲತೆಯನ್ನು ರೂಢಿಸಿಕೊಳ್ಳುತ್ತಾರೆ | 5.1 ಚಿತ್ರ ನೋಡು – ಮಾತನಾಡು.<br>5.2 ನಾನು ನಾನೆ!<br>5.3 ಚರ್ಚೆ<br>5.4 ಆಶುಭಾಷಣ | 5.1 ಶಿಕ್ಷಕರು ವಿವಿಧ ಸನ್ನಿವೇಶ ಮತ್ತು ಘಟನೆಗೆ ಸಂಬಂಧಿಸಿದ ಚಿತ್ರ, ವಿಷಯಗಳನ್ನು ನೀಡಿ ಮಕ್ಕಳಿಗೆ ಮಾತನಾಡಲು ಮಾರ್ಗದರ್ಶನ ನೀಡಿ.<br>ಉದಾ: ನಾಗರ ಪಂಚಮಿಯಂದು ಜೀವಂತ ಹಾವಿಗೆ ಹಾಲೆರೆಯುವ ಸನ್ನಿವೇಶ.<br>5.2 ವಿದ್ಯಾರ್ಥಿಯು ತನ್ನ ಬಗ್ಗೆಯೇ ಮಾತನಾಡುವಂತೆ ಪ್ರೇರೇಪಿಸಿ. |
| 6 | | ❖ ಜ್ಞಾನವನ್ನು ಹೊರಗಿನ ಜೀವನಕ್ಕೆ ಸಂಬಂಧೀಕರಿಸಿ ಮಾತನಾಡುತ್ತಾರೆ. | 6.1 ನನ್ನ ದಾರಿ ದೀಪ.<br>6.2 ನಾ ಕಂಡಂತೆ.<br>6.3 ಆಕಾಶವಾಣಿ-ಶಾರೀರವಾಣಿ | 6.1 ಶಿಕ್ಷಕರು ವಿವಿಧ ದಾರ್ಶನಿಕರ ಜೀವನದ ಆದರ್ಶ ಘಟನೆಗಳನ್ನು ಮಕ್ಕಳಿಗೆ ಮೌಖಿಕವಾಗಿ / ತಂತ್ರಜ್ಞಾನದ ಮೂಲಕ ಕೇಳಿಸಿ, ವಿದ್ಯಾರ್ಥಿಗಳ ಜೀವನದಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳ ಬಗ್ಗೆ ಮಾತನಾಡುವಂತೆ ಪ್ರೋತ್ಸಾಹಿಸಿ.<br>6.2 ನನ್ನ ಆದರ್ಶ ವ್ಯಕ್ತಿ ನನ್ನ ಅಣ್ಣ / ತಂದೆ / ಗಾಂಧೀಜಿ.<br>6.3 ರೇಡಿಯೋದಲ್ಲಿ ಬಿತ್ತರಗೊಳ್ಳುವ ಕಾರ್ಯಕ್ರಮಗಳನ್ನು ಆಲಿಸಿ, ಯಾವುದಾದರೊಂದು ಕಾರ್ಯಕ್ರಮದ ಬಗ್ಗೆ ಮಾತನಾಡುವಂತೆ ತಿಳಿಸಿ. |
| 7 | ಇತರರೊಡನೆ ಮಾತನಾಡುವಾಗ ಗೌರವ ಸೂಚಕ ಪದಗಳನ್ನು ಬಳಸುವರು. | ❖ ಬಾಯ್ದೆರೆ ಗೌರವಕ್ಕೆ ಸಂಬಂಧಿಸಿದ ಪದಗಳನ್ನು ಸ್ವರಭಾರದೊಂದಿಗೆ ಹೇಳುವ ಕೌಶಲ ಹೊಂದುತ್ತಾರೆ. | 7.1 ನಾನು ನಿಮ್ಮವನು.<br>7.2 ಗೆರೆ | 7.1 ಶಿಕ್ಷಕರು ಗೌರವ ಸೂಚಕ ಪದಗಳು ಹಾಗೂ ಸಂಬಂಧ ಸೂಚಕ ಪದಗಳ ಎರಡು ಜೊತೆ ತಯಾರಿಸಿ ಮೇಜಿನ ಮೇಲೆ ಹಾಕುವುದು. ವಿದ್ಯಾರ್ಥಿಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಿ ಪ್ರತೀ ಗುಂಪಿನಿಂದ ಒಬ್ಬೊಬ್ಬ ವಿದ್ಯಾರ್ಥಿ ಬಂದು ಮೇಜಿನ ಮೇಲೆ ಇರಿಸಿರುವ ಒಂದು ಸಂಬಂಧ ಸೂಚಕ ಪದಕ್ಕೆ, ಸೂಕ್ತ ಗೌರವ ಸೂಚಕ ಪದ ಹುಡುಕಿ ಕಪ್ಪು ಹಲಗೆಯ ಮೇಲೆ ಅಂಟಿಸಲಿ. ಹೀಗೆ ಮೊದಲು ಸರಿಯಾಗಿ ಹೊಂದಿಸಿದ ಗುಂಪಿನ ನಾಯಕ ಬಂದು ಎಲ್ಲಾ ಪದಗಳನ್ನು ಗಟ್ಟಿಯಾಗಿ ಓದಿ ಹೇಳುವಂತೆ |

| | | | | |
|---|---|---|---|---|
| | | | ಎಳೆದು ಉಚ್ಚರಿಸು<br><br>7.3 ಸೌಮ್ಯ-ಸಂಯಮ<br><br>7.4 ಸಂಭಾಷಿಸು. | ತಿಳಿಸಿ.<br>7.2 ಶಿಕ್ಷಕರು, ಗೌರವ ಸೂಚಕ ಪದಗಳನ್ನು ಹೊಂದಿರುವ ಕೆಲವು ವಾಕ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಿ, ಅದರಲ್ಲಿ ಬರುವ ಗೌರವ ಸೂಚಕ ಪದಗಳನ್ನ ಗುರುತಿಸಿ ಗೆರೆ ಎಳೆದು ಮಕ್ಕಳಿಂದ ಹೇಳಿಸಿ.<br>7.3 ಗೌರವ ಸೂಚಕ ಪದಗಳನ್ನು ಇತರರ ಭಾವನೆಗಳಿಗೆ ನೋವಾಗದ ರೀತಿಯಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಮಾತನಾಡಲು ತಿಳಿಸಿ.<br>7.4 ಶಿಕ್ಷಕರು ಮಕ್ಕಳಿಗೆ ಗೌರವ ಸೂಚಕ ಪದಗಳನ್ನು ನೀಡಿ, ಈ ಪದಗಳನ್ನು ಉಪಯೋಗಿಸಿಕೊಂಡು ಸಂಭಾಷಣೆ ನಡೆಸಲು ತಿಳಿಸುವುದು. |
| 8 | ಹೊಸ ವಿಷಯಗಳನ್ನು ಗಮನವಿಟ್ಟು ಆಲಿಸಿ, ಮಾತಿನಲ್ಲಿ ಸ್ಪಷ್ಟವಾಗಿ ಪ್ರಕಟಿಸುವುದು. | ❖ ಹೊಸ ವಿಷಯಗಳನ್ನು ಗುರುತಿಸಿ, ಅದರ ಮಹತ್ವದ ಬಗ್ಗೆ ವಿಶ್ಲೇಷಿಸುವರು. | 8.1 ಕರೋನ-ಎಚ್ಚರದಿ ಬದುಕೋಣ<br><br>8.2 ನಾಕಂಡ ನಾಡು<br><br>8.3 ನಾನೊಬ್ಬ ನಿರೂಪಕ / ನಿರೂಪಕಿ | 8.1 ಕೋವಿಡ್-19 ಹೊಸ ಸಾಂಕ್ರಾಮಿಕ ರೋಗದ ಬಗ್ಗೆ ವಿದ್ಯಾರ್ಥಿಗಳು ಮಾತನಾಡಲು ಅನುಕೂಲಿಸಿ.<br>8.2 ವಿದ್ಯಾರ್ಥಿಗಳು ತಾವು ಪ್ರವಾಸ ಕೈಗೊಂಡ ಸ್ಥಳಗಳ ಬಗ್ಗೆ ಮಾತನಾಡಲಿ.<br><br>8.3 ತರಗತಿಯಲ್ಲಿ ಕಾರ್ಯಕ್ರಮಗಳನ್ನು ನಿರೂಪಿಸಲು ಅನುಕೂಲಿಸಿ. |

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 9 | ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥಮಾಡಿಕೊಂಡು ಓದುವರು. | ❖ ಪ್ರತೀ ಅಕ್ಷರದ ವಿಶಿಷ್ಟ ಧ್ವನಿಯನ್ನು ಗುರುತಿಸಿ ಓದುತ್ತಾರೆ. | 9.1 ಅಕ್ಷರ – ಸಾಕ್ಷರ.<br><br>9.2 ಪದಗಳ ಗಟ್ಟಿ ಓದು.<br><br>9.3 ನನ್ನಂತೆ- ನೀನಲ್ಲ | 9.1 ಶಿಕ್ಷಕರು ಸ್ವರೋಚ್ಚಾರದ ಧ್ವನಿಯನ್ನು ಅದಕ್ಕೆ ತಕ್ಕ ಹಾವಭಾವದಲ್ಲಿ ಸ್ಪಷ್ಟವಾಗಿ ಹೇಳುವುದು, ವಿದ್ಯಾರ್ಥಿಗಳಿಂದ ಓದಿಸಿ, ಸರಿಯಾಗಿ ಓದಿದ ವಿದ್ಯಾರ್ಥಿಗೆ "ಅಕ್ಷರ – ಸಾಕ್ಷರ" ಎಂದು ಹೇಳಿಸುತ್ತಾ ಮೂರು ಬಾರಿ ಚಪ್ಪಾಳೆ ಹಾಕಿಸಿ.<br>9.2 ಸ್ವರ – ವ್ಯಂಜನ, ತಾಲವ್ಯ – ಮೂರ್ಧನ್ಯ, ಅಲ್ಪ ಪ್ರಾಣ _ ಮಹಾ ಪ್ರಾಣ ಹೊಂದಿರುವ ಪದಗಳ ಪಟ್ಟಿ ಮಾಡಿಸಿ ಓದಿಸುವುದು. ಧ್ವನ್ಯಂಗಗಳನ್ನು ಪರಿಚಯಿಸಿ.<br>9.3 ಧ್ವನಿ ವ್ಯತ್ಯಾಸವಿರುವ ಪದಗಳನ್ನು ಪಟ್ಟಿಮಾಡಿಸಿ, ಮಕ್ಕಳಿಂದ ಓದಿಸಿ ಅರ್ಥ ವ್ಯತ್ಯಾಸವಾಗುವುದನ್ನು ಗಮನಿಸಲು ತಿಳಿಸಿ. |

| | | | | |
|---|---|---|---|---|
| 10 | | ❖ ಗುಣಿತಾಕ್ಷರಗಳನ್ನು ಗುರುತಿಸಿ ಓದುತ್ತಾರೆ. | 10.1 ಗುಣಿತಾಕ್ಷರಗಳ ಗಟ್ಟಿಓದು.<br><br>10.2 ಗುಣಿತಾಕ್ಷರ ಸಂರಚನೆ – ಓದುವಿಕೆ.<br>10.3 ಚಾರ್ಟ್ ತಯಾರಿಕೆ | 10.1 ಶಿಕ್ಷಕರು ವ್ಯಂಜನವೊಂದಕ್ಕೆ ಸ್ವರಗಳನ್ನು ಸೇರಿಸುತ್ತಾ ಗುಣಿತಾಕ್ಷರ ಸಂರಚನೆಯಾಗುವ ಕ್ರಮವನ್ನು ಕಪ್ಪುಹಲಗೆಯ ಮೇಲೆ ಬರೆದು ಗಟ್ಟಿಯಾಗಿ ಓದುವುದು. ಇದೇ ಕ್ರಮದಲ್ಲಿ ವಿದ್ಯಾರ್ಥಿಗಳಿಂದ ಉಳಿದ ವ್ಯಂಜನಗಳಿಗೆ ಗುಣಿತಾಕ್ಷರ ಸಂರಚನೆ ಮಾಡಿ ಗಟ್ಟಿಯಾಗಿ ಓದಿಸಿ.<br>10.2 ಕ್ + ಅ = ಕ<br>ಕ್ + ಆ = ಕಾ<br>10.3 ವಿದ್ಯಾರ್ಥಿಗಳು ಗುಣಿತಾಕ್ಷರಗಳನ್ನು ಸಂರಚನೆ ಮಾಡಿ ತಮ್ಮ ಗುಂಪಿನಲ್ಲಿ ಚಾರ್ಟ್ ತಯಾರಿಸಲಿ. |
| 11 | | ❖ ಸಂಯುಕ್ತಾಕ್ಷರಗಳನ್ನು ಗುರುತಿಸಿ ಓದುತ್ತಾರೆ. | 11.1 ಚಿಟಿಕೆ – ಚಪ್ಪಾಳೆ.<br><br>11.2ಹಚ್ಚು ಬಣ್ಣ – ಓದು ಅಣ್ಣಾ. | 11.1 ಶಿಕ್ಷಕರು ಮಕ್ಕಳಿಗೆ ವಿವಿಧ ಪಠ್ಯಾಂಶ ಕೊಟ್ಟು ಅದರಲ್ಲಿ ಬರುವ ಸಂಯುಕ್ತಾಕ್ಷರಗಳನ್ನು ಗುರುತಿಸಲು ಹೇಳುವುದು. ಪ್ರತೀ ವಿದ್ಯಾರ್ಥಿ ಸಂಯುಕ್ತಾಕ್ಷರ ಗುರುತಿಸಿ ಗಟ್ಟಿಯಾಗಿ ಓದುತ್ತಾ, ವಿಜಾತಿ ಸಂಯುಕ್ತಾಕ್ಷರ ಬಂದಾಗ ಚಿಟಿಕೆಯನ್ನು, ಸಜಾತಿ ಸಂಯುಕ್ತಾಕ್ಷರ ಬಂದಾಗ ಚಪ್ಪಾಳೆಯನ್ನು |

| | | | | |
|---|---|---|---|---|
| | | | 11.3 ಸಂಗ್ರಹಿಸು-ವಾಚಿಸು | ಹಾಕುವುದು. ನಂತರ ಒಬ್ಬ ವಿದ್ಯಾರ್ಥಿ ಸಂಯುಕ್ತಾಕ್ಷರ ಓದಿದಾಗ ಉಳಿದ ವಿದ್ಯಾರ್ಥಿಗಳು ಸಜಾತಿ – ವಿಜಾತಿ ಎಂದು ಗುರುತಿಸಿ, ಚಿಟಿ – ಚಪ್ಪಾಳೆ ಹಾಕುವುದರ ಮೂಲಕ ಸಜಾತಿ – ವಿಜಾತಿ ಎಂದು ಗುರುತಿಸಲಿ.<br>11.2 ಕೊಟ್ಟ ಲೇಖನದಲ್ಲಿ ಬರುವ ವಿಜಾತಿ ಸಂಯುಕ್ತಾಕ್ಷರಕ್ಕೆ ಹಸಿರು ಬಣ್ಣ ಸಜಾತಿ ಸಂಯುಕ್ತಾಕ್ಷರಕ್ಕೆ ಕೆಂಪು ಬಣ್ಣ ಹಾಕಿ ಓದಿಸಿ.<br>11.3 ವಾರ್ತಾ ಪತ್ರಿಕೆಯನ್ನು ಓದಿ, ಅದರಲ್ಲಿ ಬರುವ ಸಂಯುಕ್ತಾಕ್ಷರಗಳನ್ನು ಸಂಗ್ರಹಿಸಿ ಓದಲು ತಿಳಿಸಿ. |
| 12 | ಪದಪುಂಜ ಮತ್ತು ಗಾದೆಮಾತು/ನುಡಿಗಟ್ಟುಗಳನ್ನು ಓದಿ ಅರ್ಥ ಮಾಡಿಕೊಳ್ಳುವರು. | ❖ ಪದಪುಂಜಗಳನ್ನು ಸ್ಪಷ್ಟವಾಗಿ ತಪ್ಪಿಲ್ಲದಂತೆ ಓದುತ್ತಾರೆ.<br>❖ ನಿತ್ಯ | 12.1 ಓಡು ಬೇಗ – ಓದು ವೇಗ. | 12.1 ಶಿಕ್ಷಕರು ಕೆಲವು ವಾಕ್ಯ ಗುಚ್ಛಗಳನ್ನು ಹಾಗೂ ಅದೇ ವಾಕ್ಯ ಗುಚ್ಛದ ಪದಗಳನ್ನು ತಯಾರಿಸಿಕೊಂಡು ಮೇಜಿನ ಮೇಲಿಡುವುದು. ತರಗತಿಯನ್ನು ಎರಡು ಸಾಲಿನಲ್ಲಿ ನಿಲ್ಲಿಸಿ, ಎರಡೂ ಸಾಲಿನ ಮೊದಲ ವಿದ್ಯಾರ್ಥಿಯನ್ನು ಕರೆದು ಇತರೆ ವಿದ್ಯಾರ್ಥಿಗಳಿಗೆ ಕಾಣದಂತೆ ವಾಕ್ಯ ಗುಚ್ಛ |

| | | | | |
|---|---|---|---|---|
| | | ಬಳಕೆಯಲ್ಲಿರುವ ಗಾದೆಮಾತು/ ನುಡಿಗಟ್ಟುಗಳನ್ನು ಅರ್ಥಬದ್ಧವಾಗಿ ಓದುತ್ತಾರೆ. | 12.2 ನಾನು ನೀನು ಜೋಡಿ.<br>12.3 ಗೆಳೆಯನ ಬರೆಹ-ಓದುವೆ ನಾ ಈ ತರಹ | ಪ್ರದರ್ಶಿಸಲಿ. ಈ ವಾಕ್ಯ ಗುಚ್ಛ ಓದಿಕೊಂಡ ವಿದ್ಯಾರ್ಥಿ ತನ್ನ ಗುಂಪಿನ ಇತರೆ ವಿದ್ಯಾರ್ಥಿಯ ಕಿವಿಯಲ್ಲಿ ಹೇಳಲಿ. ಹೀಗೆ ಒಬ್ಬ ವಿದ್ಯಾರ್ಥಿ ಮತ್ತೊಬ್ಬ ವಿದ್ಯಾರ್ಥಿಯ ಕಿವಿಯಲ್ಲಿ ಹೇಳುತ್ತಾ ಕೊನೆಯ ವಿದ್ಯಾರ್ಥಿ ಕೇಳಿಸಿಕೊಂಡ ವಾಕ್ಯಗುಚ್ಛವನ್ನು ಟೇಬಲ್ ಮೇಲೆ ಇಟ್ಟಿರುವ ಪದಗಳನ್ನು ಬಳಸಿ ವಾಕ್ಯ ರಚಿಸಿ ಗಟ್ಟಿಯಾಗಿ ಓದಿಸಿ.<br>12.2 ಕುಶಲ ಸಾಹಿತ್ಯದಲ್ಲಿರುವ ಚಟುವಟಿಕೆಯನ್ನು ಶಿಕ್ಷಕರು ಬಳಸಿಕೊಳ್ಳುವುದು.<br>12.3 ಸಹಪಾಠಿಗಳು ಬರೆದ ನುಡಿಗಟ್ಟುಗಳನ್ನು ಓದಿಸಿ. |
| 13 | ಓದಿದ ವಿಷಯಗಳನ್ನು ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವರು. | ❖ ವಚನಗಳನ್ನು ಅರ್ಥವತ್ತಾಗಿ ಓದುವರು. | 13.1 ವಚನ ವಾಚನ<br>13.2 ವಾಚಿಸು ವಿವರಿಸು<br>13.3 ವೀಡಿಯೋ ಬಳಕೆ | 13.1 ವಚನಗಳನ್ನು ಸಂಗ್ರಹಿಸಿ, ಓದಿಸಿ. |
| 14 | ಮುದ್ರಿತ ಪಠ್ಯೇತರ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | ❖ ಓದಿದ ಪಠ್ಯದಲ್ಲಿನ ವಿಷಯವನ್ನು ಆಧರಿಸಿ ಕೇಳಿದ ಪ್ರಶ್ನೆಗಳಿಗೆ ನಿಖರವಾಗಿ | 14.1 ಓದಿಗೊಂದು ವಿಚಾರ – ಪ್ರಶ್ನೆಗೊಂದು ಉತ್ತರ. | 14.1 ಶಿಕ್ಷಕರು ಮಕ್ಕಳನ್ನು ಗುಂಪಿನಲ್ಲಿ ಕೂರಿಸಿ ಪ್ರತೀ ಗುಂಪಿಗೂ ವಿಭಿನ್ನ ವಿಚಾರಗಳನ್ನು ನೀಡುವುದು. ಉದಾ: |

| | | | | |
|---|---|---|---|---|
| | | ಉತ್ತರಿಸುತ್ತಾರೆ. | | ಆಮಂತ್ರಣ ಪತ್ರಿಕೆ, ಜ್ಞಾಪನ, ಜಾಹೀರಾತು, ಪ್ರಕಟಣೆ, ಕೈ ಬರೆಹ, ಅಂಗಡಿಯ ಬಿಲ್ಲುಗಳು ಇತ್ಯಾದಿ. ವಿದ್ಯಾರ್ಥಿಗಳು ತಮಗೆ ದೊರೆತ ವಿಚಾರವನ್ನು ಓದಿ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಒಂದು ಪದ, ವಾಕ್ಯದಲ್ಲಿ ತನ್ನದೇ ಗುಂಪಿನ ಸಹಪಾಠಿಗಳಿಂದ ಉತ್ತರ ಪಡೆಯಲು ಮಾರ್ಗದರ್ಶಿಸಿ. |
| | | | 14.2 ನನ್ನ ಪ್ರಶ್ನೆ – ನಿನ್ನ ಉತ್ತರ. | 14.2 ಮಕ್ಕಳಿಗೆ ಆಕರ್ಷಕವಾದ ಕಥೆಗಳನ್ನು ನೀಡಿ ಓದಿಸುವುದು. ಬಹು ಆಯ್ಕೆ ಪ್ರಶ್ನೆಗಳನ್ನು ಕೇಳಿ ಸೂಕ್ತ ಉತ್ತರವನ್ನು ಪಡೆಯುವುದು. |
| | | | 14.3 ವಾಚಿಸು ವಾರ್ತಾ ಪತ್ರಿಕೆ | 14.3 ಪ್ರಸ್ತುತ ದಿನ ವಿಶೇಷ ಕುರಿತು ಮುಖ್ಯಾಂಶಗಳನ್ನು ಚರ್ಚಿಸಿ ಪ್ರಶ್ನೆಗಳಿಗೆ ಉತ್ತರ ಪಡೆಯಿರಿ. |
| 15 | | ❖ ಓದಿದ ಪಠ್ಯದಲ್ಲಿನ ವಿಷಯವನ್ನು ಆಧರಿಸಿ ಕೇಳಿದ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸುತ್ತಾರೆ. | 15.1 ಲೇಖನದೊಳು ವಿಹರಿಸು – ವಿಷಯವನ್ನು ವಿವರಿಸು. | 15.1 ಶಿಕ್ಷಕರು ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಗೊಂಡ ಆಸಕ್ತಿದಾಯಕ ಹಾಗೂ ಚಿಂತನೆಗೆ ಅವಕಾಶ ನೀಡುವಂತಹ ಲೇಖನಗಳನ್ನು ಸಂಗ್ರಹಿಸಿ |

| | | | | |
|---|---|---|---|---|
| | | | 15.2 ಓದುವೆ ನಾನು ಪ್ರಬಂಧ. | ವಿದ್ಯಾರ್ಥಿಗಳಿಗೆ ನೀಡಿ ಓದಿಸಿ.<br>15.2ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಂಡಿರುವ ವಿವರಣಾತ್ಮಕ ಉತ್ತರ ಬಯಸುವ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಿರಿ. |
| 16 | | ❖ ಕವಿತೆಯನ್ನು ಅರ್ಥವತ್ತಾಗಿ ಓದುತ್ತಾರೆ / ವಾಚಿಸುತ್ತಾರೆ. | 16.1 ಹಾಡೊಂದು ನಾ ಹಾಡುವೆ.<br>16.2 ನನ್ನ ಹಾಡು ನನ್ನದು.<br>16.3 ಗಮಕ ವಾಚನ | 16.1 ಶಿಕ್ಷಕರು ಸರಳ ಕವಿತೆಯನ್ನು ಮಾದರಿಯಾಗಿ ವಾಚಿಸಿ ತಂತ್ರಜ್ಞಾನ ಬಳಸಿ ಕವಿತೆಗಳನ್ನು ಕೇಳಿಸಿ, ವಿದ್ಯಾರ್ಥಿಗಳು ಅದರ ಅರ್ಥಗ್ರಹಿಸಿ ಲಯಬದ್ಧವಾಗಿ ವಾಚಿಸುವಂತೆ ಪ್ರೋತ್ಸಾಹಿಸಿ.<br>16.2 ಕವಿತೆ ರಚಿಸಲು ಪ್ರೇರೇಪಿಸಿ. |
| 17 | ಸುಮಾರು ಐದುನೂರು ಪದಗಳನ್ನು ಸ್ವತಂತ್ರವಾಗಿ ಓದಿ ಗ್ರಹಿಸುವರು. | ❖ ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಗುರುತಿಸಿ ಓದುತ್ತಾರೆ.<br>❖ ವಿರುದ್ಧಾರ್ಥಕ ಪದಗಳನ್ನು ಗುರುತಿಸಿ ಓದುತ್ತಾರೆ. | 17.1 ಯಾರು ನನಗೆ ಸಮಾನ? | 17.1 ಶಿಕ್ಷಕರು ಶಬ್ದಕೋಶ / ನಿಘಂಟನ್ನು ಬಳಸುವ ಕ್ರಮವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು, ನಂತರ ನೀಡಿರುವ ಪದಗಳಿಗೆ ನಿಘಂಟಿನ ಸಹಾಯದಿಂದ ಸಮಾನಾರ್ಥಕ ಪದಗಳನ್ನು ಗುರುತಿಸಿ, ಆ ಪದದೊಂದಿಗೆ ಸೇರಿಸಿ ಓದಿಸಿ.<br>ಉದಾ: ಭಾನು= ರವಿ, ಸೂರ್ಯ, ನೇಸರ, |

| | | | | |
|---|---|---|---|---|
| | | | | ಆದಿತ್ಯ, ಭಾಸ್ಕರ. |
| | | | 17.2 ಪದ ಚಪ್ಪರ | 17.2 ಸಮನಾರ್ಥಕ ಪದಗಳ ಪದಚಪ್ಪರ ತಯಾರಿಸಿ. |
| | | | 17.3 ನಿಘಂಟು ತಯಾರಿಕೆ | 17.3 ಅಕಾರಾದಿಯಾಗಿ ಸಮನಾರ್ಥಕಪದಗಳ ನಿಘಂಟು ತಯಾರಿಸಿ. |
| | | | 17.4 ಎದುರಾಳಿ – ಪದದಾಳಿ. | 17.4 ಶಿಕ್ಷಕರು ವಿರುದ್ಧಾರ್ಥಕ ಪದಗಳ ಎರಡೆರಡು ಮಿಂಚು ಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವುದು. ಒಬ್ಬ ವಿದ್ಯಾರ್ಥಿ ಓದಿದ ಪದಕ್ಕೆ ಸೂಕ್ತ ವಿರುದ್ಧ ಪದ ಹೊಂದಿರುವ ವಿದ್ಯಾರ್ಥಿ ಥಟ್ಟನೆ ಉತ್ತರ ಹೇಳುವುದು. ಹೀಗೆ ಕಾಲ ವ್ಯಯವಾಗದಂತೆ ವಿದ್ಯಾರ್ಥಿಗಳು ಪಟಪಟನೆ ಓದುವಂತೆ ಪ್ರೇರೇಪಿಸಿ. |
| | | | 17.5 ಉಲ್ಟಾ – ಪಲ್ಟಾ. | 17.5 ಶಿಕ್ಷಕರು ಕೈಚೀಲವೊಂದರಲ್ಲಿ ವಿರುದ್ಧಾರ್ಥಕ ಪದಗಳ ಚೀಟಿಗಳನ್ನು ನೀಡುವುದು. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಬಂದು ಕೈಚೀಲದಲ್ಲಿರುವ ಒಂದು ಚೀಟಿ ತೆಗೆದು ತನಗೆ ದೊರೆತ ಪದ ಹೇಳದೆ ಅದರ ವಿರುದ್ಧ ಪದ ಹೇಳಿಸಿ. |

| | | | | |
|---|---|---|---|---|
| | | | 17.6 ಪದ ಗುರುತಿಸು ವಿರುದ್ಧ ಪದ ಸೇರಿಸು. | 17.6 ಪಾಠವೊಂದನ್ನು ಓದಿಸಿ ಅದರಲ್ಲಿ ಬರುವ ಕೆಲವು ಪದಗಳನ್ನು ಗುರುತಿಸಿ, ಅವುಗಳಿಗೆ ವಿರುದ್ಧಪದ ಹೇಳಿಸಿ. |

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 18 | ಆಲಿಸಿದ ಮತ್ತು ಓದಿದ ವಿಷಯಗಳನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳಲ್ಲಿ ಬರೆಯುವರು. | ❖ ಲೇಖನ ಚಿಹ್ನೆಗಳನ್ನು ಹೆಸರಿಸಿ ಗುರುತಿಸಿ ಬರೆಯುತ್ತಾರೆ. | 18.1 ಎಲೆಕೋಸು – ಎಳೆ ಬಿಡಿಸು.<br>18.2 ಪ್ರಶ್ನೋತ್ತರ.<br>18.3 ಶೋಧಿಸು-ಸೇರಿಸು | 18.1 ಶಿಕ್ಷಕರು ಲೇಖನ ಚಿಹ್ನೆ ರಹಿತ ಒಂದು ಪ್ಯಾರಾವನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಈಗಾಗಲೇ ಹಾಳೆಗಳಿಂದ ಸಿದ್ಧಪಡಿಸಿಕೊಂಡ ಎಲೆಕೋಸನ್ನು ವಿದ್ಯಾರ್ಥಿಗಳು ಒಬ್ಬರಿಂದ ಮತ್ತೊಬ್ಬರಿಗೆ ಸಾಗಿಸುತ್ತಾ ಶಿಕ್ಷಕರು ಚಪ್ಪಾಳೆ ತಟ್ಟಿದ ಕೂಡಲೇ ಎಲೆಕೋಸು ಹಿಡಿದಿರುವ ವಿದ್ಯಾರ್ಥಿಯು ಒಂದು ಎಲೆ ಬಿಡಿಸಿ ಅದರಲ್ಲಿ ದೊರೆಯುವ ಲೇಖನ ಚಿಹ್ನೆಯನ್ನು ಗಮನಿಸಿ ಕಪ್ಪು ಹಲಗೆಯ ಮೇಲೆ ಬರೆದಿರುವ ಪ್ಯಾರಾದಲ್ಲಿನ ಸೂಕ್ತ ಸ್ಥಳದಲ್ಲಿ ಆ ಲೇಖನ ಚಿಹ್ನೆಯನ್ನು ಬರೆಯಿಸಿ.<br>18.2 ವಿವಿಧ ಲೇಖನ ಚಿಹ್ನೆಗಳುಳ್ಳ ಮಿಂಚು ಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಪ್ರಶ್ನಿಸುವುದರ ಮೂಲಕ ಲೇಖನ ಚಿಹ್ನೆಗಳನ್ನು ಗುರುತಿಸಿ ಬರೆಯಿಸಿ.<br>18.3 ಲೇಖನ ಚಿಹ್ನೆಗಳನ್ನು ಗುರುತಿಸಿ ವಾಕ್ಯದಲ್ಲಿ ಸೇರಿಸಲು ತಿಳಿಸಿ. |
| 19 | | ❖ ಸ್ವರಭಾರಯುಕ್ತವಾಗಿ ಹೇಳಿದ ಸರಳ / ಸಂಯುಕ್ತ | 19.1 ಉಕ್ತಲೇಖನ.<br>19.2 ಲಘು | 19.1 ಒಂದು ಪರಿಚ್ಛೇದ ಉಕ್ತಲೇಖನ ನೀಡಿ ಅದಕ್ಕೆ ವಿದ್ಯಾರ್ಥಿಗಳು ಸೂಕ್ತ ಲೇಖನ ಚಿಹ್ನೆಗಳನ್ನು ಬರೆಯುವಂತೆ ತಿಳಿಸಿ. ಇಲ್ಲಿ ದೋಷಗಳು ಕಂಡುಬಂದಲ್ಲಿ ಸರಿಪಡಿಸಿ. |

<table>
<tr><td></td><td></td><td>ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ತಪ್ಪಿಲ್ಲದೆ ಸ್ಪಷ್ಟವಾಗಿ ಬರೆಯುತ್ತಾರೆ.</td><td>ಪ್ರಬಂಧ<br>19.3 ತುಣುಕು-ಇಣುಕು – ಲೇಖನ ಚಿಹ್ನೆ ಹಾಕು</td><td>19.2 ನೀಡಿದ ವಿಷಯಗಳಿಗೆ ಲೇಖನ ಚಿಹ್ನೆ ಬಳಸಿ ಲಘುಪ್ರಬಂಧ ಬರೆಸಿ.<br>19.3 ನಾಟಕವೊಂದರ ತುಣುಕುಗಳಿಗೆ (ಸಂಭಾಷಣೆಗಳು) ಲೇಖನ ಚಿಹ್ನೆಗಳನ್ನು ಹಾಕಿಸಿ.</td></tr>
<tr><td>20</td><td rowspan="2">ಸರಳ ಕ್ರಿಯಾತ್ಮಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರವಣಿಗೆಯಲ್ಲಿ ಬಳಸುವರು.</td><td>❖ ಸೂಚಿತ ಒಂದು ಕಾರ್ಯವನ್ನು ಗಮನಿಸಿ ಅದನ್ನು ತನ್ನ ಮಾತುಗಳಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಒಳಗೊಂಡಂತೆ ತಪ್ಪಿಲ್ಲದೆ ಅಂದವಾಗಿ ಬರೆಯುತ್ತಾರೆ.</td><td>20.1 ನನ್ನನ್ನು ಬಳಸು – ವಾಕ್ಯ ರಚಿಸು.<br>20.2 ಚಾರ್ಟ್ ತಯಾರಿಕೆ<br>20.3 ಸಾಮ್ಯತೆ – ನ್ಯೂನತೆ.<br>20.4 ಆಲ್ಬಮ್ ತಯಾರಿಕೆ</td><td>20.1 ವಿದ್ಯಾರ್ಥಿಗಳಿಗೆ ಕ್ರಿಯಾಪದಗಳನ್ನು ನೀಡಿ ಸೂಕ್ತ ವಾಕ್ಯ ರಚಿಸಲು ಮಾರ್ಗದರ್ಶನ ನೀಡುವುದು. ರಚಿಸಿದ ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳನ್ನೊಳಗೊಂಡಿದೆಯೇ ಎಂಬುದನ್ನು ಪರೀಕ್ಷಿಸಿ. ಕಾರ್ಯ / ಕ್ರಿಯೆಗೆ ಸಂಬಂಧಿಸಿದ ಚಿತ್ರ ತೋರಿಸಿ ವಾಕ್ಯ ರಚಿಸಲು ಪ್ರತಿ ವಿದ್ಯಾರ್ಥಿಗೂ ಅನುಕೂಲಿಸಿ.<br>ಉದಾ: ಮೀನು ನೀರಿನಲ್ಲಿ ಈಜುತ್ತಿದೆ.
<table><tr><th>ಕರ್ತೃ</th><th>ಕರ್ಮ</th><th>ಕ್ರಿಯಾ</th></tr><tr><td>ಮೀನು</td><td>ನೀರಿನಲ್ಲಿ</td><td>ಈಜುತ್ತಿದೆ</td></tr></table>
20.3 ಶಿಕ್ಷಕರು ಒಂದೇ ರೀತಿ ಕಾಣುವ ಆದರೆ ವ್ಯತ್ಯಾಸವಿರುವ ಎರಡು ಚಿತ್ರಗಳನ್ನು ತರಗತಿಯಲ್ಲಿ ಎಲ್ಲಾ ಮಕ್ಕಳಿಗೂ ಕಾಣುವಂತೆ ನೇತುಹಾಕಿ ಎರಡೂ ಚಿತ್ರಗಳನ್ನು ಗಮನಿಸಿ ಚಿತ್ರಗಳಲ್ಲಿನ ಸಾಮ್ಯತೆ ಮತ್ತು ವ್ಯತ್ಯಾಸವನ್ನು ಗುರುತಿಸಿ ಬರೆಯುವಂತೆ ಪ್ರೋತ್ಸಾಹಿಸುವುದು.<br>20.4 ವೃತ್ತಪತ್ರಿಕೆ/ಮಾಸ ಪತ್ರಿಕೆ ಇವುಗಳಲ್ಲಿ ಬರುವ ಸಾಮ್ಯತೆ-ನ್ಯೂನತೆ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರಿಸಿ.</td></tr>
<tr><td>21</td><td>❖ ಪದಗಳ ವಚನ ರೂಪವನ್ನು ಗುರುತಿಸಿ ವರ್ಗೀಕರಿಸಿ ಬರೆಯುತ್ತಾರೆ.<br>❖ ಕೊಟ್ಟ</td><td>21.1 ಪದಗಳ ವರ್ಗೀಕರಣ.<br>21.2 ವಚನ – ವಾಚನ.</td><td>21.1 ಏಕವಚನ ಮತ್ತು ಬಹುವಚನ ಹೊಂದಿರುವ ಕಾರ್ಡುಗಳನ್ನು ವಿದ್ಯಾರ್ಥಿಗಳಿಗೆ ನೀಡಿ ವರ್ಗೀಕರಿಸಿ ಬರೆಯಲು ತಿಳಿಸಿ.<br>21.2 ವಿದ್ಯಾರ್ಥಿಗಳನ್ನು ಎರಡು ಗುಂಪುಗಳಲ್ಲಿ ಕೂರಿಸಿ ಒಂದು ಗುಂಪು</td></tr>
</table>

| | | | | |
|---|---|---|---|---|
| | | ವಾಕ್ಯಗಳಿಗೆ ವಚನ ಬದಲಿಸಿ ಬರೆಯುತ್ತಾರೆ. | 21.3 ವಚನ ಹುಡುಕು – ಬಣ್ಣಹಚ್ಚು.<br>21.4 ಗೆರೆ ಎಳೆದ ಪದದ ವಚನ ಬದಲಿಸಿ ಬರೆಯುವುದು | ಏಕವಚನದ ಹಾಗೂ ಮತ್ತೊಂದು ಗುಂಪು ಬಹುವಚನದ ಸುಮಾರು 30-50 ಪದಗಳನ್ನು ನಿಗಧಿತ ಸಮಯದಲ್ಲಿ ಕೊಟ್ಟ ಚೀಟಿಗಳಲ್ಲಿ ಪ್ರತ್ಯೇಕವಾಗಿ ಬರೆಯುವುದು. ನಂತರ ಮೊದಲ ಗುಂಪಿನ ಒಬ್ಬ ವಿದ್ಯಾರ್ಥಿಯು ತಾನು ಬರೆದ ಒಂದು ಏಕವಚನ ಪದ ಓದಿದರೆ ಎರಡನೇ ಗುಂಪಿನ ವಿದ್ಯಾರ್ಥಿಯು ಸೂಕ್ತ ಉತ್ತರವಿರುವ ಬಹುವಚನ ಪದ ಓದುವುದು. ನಂತರ ಇಬ್ಬರೂ ವಿದ್ಯಾರ್ಥಿಗಳಿಂದ ತಮ್ಮ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿಸಿ.<br>21.3 ಪಠ್ಯಾಂಶದಲ್ಲಿನ ವಚನಗಳನ್ನು ಗುರುತಿಸಿ ಬಣ್ಣ ಹಚ್ಚಿಸಿ.<br>21.4 ವಾಕ್ಯಗಳಲ್ಲಿ ಗೆರೆ ಎಳೆದ ಪದದ ವಚನ ಬದಲಾಯಿಸಿ ಬರೆಯಲು ವಿದ್ಯಾರ್ಥಿಗಳಿಗೆ ಸೂಚನೆ ನೀಡಿ ನಂತರ ಅರ್ಥಪೂರ್ಣವಾಗಿ ವಾಕ್ಯ ರಚಿಸಿರುವುದನ್ನು ಪರಿಶೀಲಿಸುವುದು.<br>ಉದಾ: ಹಸು ಹಾಲನ್ನು ನೀಡುತ್ತದೆ.<br>ಹಸುಗಳು ಹಾಲನ್ನು ನೀಡುತ್ತವೆ. |
| 22 | | ❖ ತತ್ಸಮ-ತದ್ಭವ ಪದಗಳನ್ನು ಬರೆಯುತ್ತಾರೆ. | 22. 1 ತತ್ಸಮ ಓದು- ತದ್ಭವ ಬರೆ<br>22.2 ನಿಯೋಜಿತ ಕಾರ್ಯ<br>22.3 ಹೆಕ್ಕಿ ಬರೆ | 22.1 ತತ್ಸಮ-ತದ್ಭವ ಪದಗಳನ್ನು ಅರ್ಥೈಸಿದ ನಂತರ ಬರೆಯಿಸಿ.<br>22.2 ತತ್ಸಮ-ತದ್ಭವ ಪದಗಳ ಪಟ್ಟಿ ತಯಾರಿಸಿ.<br>22.3 ಕೋಷ್ಟಕದಲ್ಲಿರುವ ತತ್ಸಮ-ತದ್ಭವ ಪದಗಳನ್ನು ವಿಂಗಡಿಸಿ ಬರೆಸಿ. |
| 23 | | ❖ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯುತ್ತಾರೆ. | 23.1 ಮಾದರಿಯಂತೆ ಬಿಡಿಸಿ ಬರೆಯುವುದು | 23.1 ಶಿಕ್ಷಕರು ಪದಗಳನ್ನು ಬಿಡಿಸಿ ಬರೆಯುವ ಕ್ರಮ ವನ್ನು ಉದಾಹರಣೆಯೊಂದಿಗೆ ವಿದ್ಯಾರ್ಥಿಗಳಿಗೆ ತಿಳಿಸಿ ಅಭ್ಯಾಸ ಹಾಳೆಯಲ್ಲಿ ಕೊಟ್ಟ |

<table>
<tr><td></td><td></td><td></td><td>23.2 ಬಿಡಿಸಿರುವ ಪದ ಸೇರಿಸಿ ಬರೆಯುವುದು</td><td>ಪದಗಳನ್ನು ಅರ್ಥಪೂರ್ಣವಾಗಿ ಬಿಡಿಸಿ ಬರೆಯಲು ಮಾರ್ಗದರ್ಶಿಸಿ.<br>ಉದಾ: ಮಳೆಗಾಲ = ಮಳೆ + ಕಾಲ.</td></tr>
<tr><td>24</td><td></td><td>❖ ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯುತ್ತಾರೆ.</td><td>24.1 ಬಿಡಿಸಿ – ಬಿಡಿಸು.<br>24.2 ನನ್ನವರು ಯಾರು ಇಲ್ಲಿ?<br>24.3 ಸಂಧಿ ಹೆಸರು ಹೇಳೋ ಜಾಣ</td><td>24.1 ಕಪ್ಪುಹಲಗೆಯ ಮೇಲೆ ಕನ್ನಡ ಸಂಧಿಗಳ ಮಾದರಿ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಲು ತಿಳಿಸಿ.<br>24.2 ಶಿಕ್ಷಕರು ಕಪ್ಪು ಹಲಗೆಯ ಬಲಭಾಗದಲ್ಲಿ ನನ್ನವರು ಯಾರು ಇಲ್ಲಿ ಎಂಬ ತಲೆಬರೆಹ ಬರೆದು ಅದರ ಕೆಳಗೆ ಲೋಪ, ಆಗಮ, ಆದೇಶ ಸಂಧಿ ಎಂದು ಬರೆಸಿ. ಕಪ್ಪು ಹಲಗೆಯ ಎಡಭಾಗದಲ್ಲಿ ಕನ್ನಡ ಸಂಧಿಗೆ ಸಂಬಂಧಿಸಿದ ಪದಗಳನ್ನು ಬರೆಸುವುದು. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಬಂದು ಒಂದೊಂದೇ ಪದ ಬಿಡಿಸಿ ಸೂಕ್ತ ಸಂಧಿಯ ಗುಂಪಿಗೆ ಆ ಪದವನ್ನು ಸೇರಿಸಿ.
<table>
<tr><th colspan="3">ನನ್ನವರು ಯಾರು ಇಲ್ಲಿ</th></tr>
<tr><td>ಲೋಪ ಸಂಧಿ</td><td>ಆಗಮ ಸಂಧಿ</td><td>ಆದೇಶ ಸಂಧಿ</td></tr>
</table>
24.3 ಕೆಲವು ಸಂಧಿಪದಗಳನ್ನು ನೀಡಿ ಸಂಧಿ ಬಿಡಿಸಿ ಹೆಸರು ಹೇಳುವಂತೆ ತಿಳಿಸಿ.</td></tr>
<tr><td>25</td><td></td><td>❖ ಪ್ರಾಸ ಪದಗಳನ್ನು ಗುರುತಿಸಿ ಬರೆಯುತ್ತಾರೆ.</td><td>25.1 ಪ್ರಾಸ ಬರೆ – ತ್ರಾಸ ಮರೆ.<br>25.2 ನಾ ಬರೆದ ಕವಿತೆ.<br>25.3 ಪ್ರಾಸ ಪಟ್ಟಿ-ಮಾಡು ಪುಟ್ಟಿ</td><td>25.1 ಪ್ರಾಸಪದ ಹೊಂದಿರುವ ಪದ್ಯಭಾಗವನ್ನು ಕೊಟ್ಟು ವಿದ್ಯಾರ್ಥಿಗಳು ಪ್ರಾಸ ಪದಗಳನ್ನು ಆರಿಸಿ ಬರೆಯುವಂತೆ ತಿಳಿಸಿ.<br>25.2 ಪ್ರಾಸ ಪದಗಳನ್ನು ಬಳಸಿ ವಿದ್ಯಾರ್ಥಿಗಳು ಸ್ವರಚಿತ ಕವಿತೆಗಳನ್ನು ಬರೆಯಲು ಪ್ರೋತ್ಸಾಹಿಸಿ.</td></tr>
<tr><td>26</td><td></td><td>❖ ವಿಭಕ್ತಿ ಪ್ರತ್ಯಯಗಳ ಬಗ್ಗೆ</td><td>26.1 ಬಲ್ಲೆಯಾ? ಪ್ರತ್ಯಯ.</td><td>26.1 ಚಾರ್ಟ್ ಮೂಲಕ ವಿಭಕ್ತಿ ಪ್ರತ್ಯಯಗಳನ್ನು ಪರಿಚಯಿಸಿ.</td></tr>
</table>

| | | | | |
|---|---|---|---|---|
| | | ಅರಿಯುತ್ತಾರೆ. | 26.2 ನಾಮಪದದಿ – ಸಪ್ತಪದಿ.<br>26.3 ಬರೆಹ – ನನ್ನ ತರಹ. | 26.2 ತರಗತಿಯ ನೆಲದ ಮೇಲೆ ವಿಭಕ್ತಿ ಪ್ರತ್ಯಯಗಳನ್ನು ಬರೆದು ಪ್ರತೀ ವಿದ್ಯಾರ್ಥಿ ತನ್ನ ಹೆಸರಿನೊಂದಿಗೆ ಪ್ರತ್ಯಯಗಳನ್ನು ಸೇರಿಸುತ್ತಾ ಸಪ್ತಪದಿ ತುಳಿಯಲು ತಿಳಿಸಿ.<br>26.3 ಕೊಟ್ಟ ನಾಮ ಪದಕ್ಕೆ ವಿಭಕ್ತಿ ಪ್ರತ್ಯಯ ಸೇರಿಸಿ ಘಟನೆಯೊಂದನ್ನು ಬರೆಯಲು ತಿಳಿಸಿ. |
| 27 | ಪಾಠದಲ್ಲಿ ಬರುವ ವಿಚಾರಗಳನ್ನು ಕಥೆ, ಸಂಭಾಷಣೆ, ಸಾರಾಂಶ ರೂಪದಲ್ಲಿ ಬರೆಯುವರು. | ❖ ಅರ್ಥೈಸಿಕೊಂಡ ವಿಚಾರಗಳನ್ನು ಕಥೆಯ ರೂಪದಲ್ಲಿ ಬರೆಯುತ್ತಾರೆ.<br>❖ | 27.1 ಬರೆಯೋಣ ಬಾರ.<br>27.2 ಪುಸ್ತಕದಿಂದ ಮಸ್ತಕಕ್ಕೆ<br>27.3 ಅಪೂರ್ಣತೆಯಿಂದ ಪೂರ್ಣತೆಯೆಡೆಗೆ | 27.1 ಶಿಕ್ಷಕರು ಐತಿಹಾಸಿಕ / ಪೌರಾಣಿಕ ಘಟನೆಗಳನ್ನು ತಿಳಿಸಿ ನಂತರ ವಿದ್ಯಾರ್ಥಿಗಳಿಗೆ ಕಥಾರೂಪದಲ್ಲಿ ಬರೆಯಲು ತಿಳಿಸಿ.<br>ಉದಾ: ದ್ರೋಣಾಚಾರ್ಯ ಹಾಗೂ ಏಕಲವ್ಯ ನಡುವೆ ನಡೆದ ಸಂಭಾಷಣೆ.<br>27.2 ಓದುವ ಮೂಲೆ / ಗ್ರಂಥಾಲಯದಲ್ಲಿ ಲಭ್ಯವಿರುವ ತನ್ನ ನೆಚ್ಚಿನ ಪುಸ್ತಕವನ್ನು ಓದಿ ತನಗಿಷ್ಟವಾದ ಪ್ರಮುಖಾಂಶಗಳನ್ನು ಕಪ್ಪು ಹಲಗೆಯ ಮೇಲೆ ಬಿಡಿಸಿರುವ (ತಲೆ) ಚಿತ್ರದೊಳಗೆ ಬರೆಸಿ.<br>27.3 ಅಪೂರ್ಣ ಕಥೆಯನ್ನು ಹೇಳಿ ವಿದ್ಯಾರ್ಥಿಗಳು ಪೂರ್ಣಗೊಳಿಸಲು ತಿಳಿಸಿ. |
| 28 | | ❖ ಕವಿತೆಯ ಸಾರಾಂಶವನ್ನು ವಿವಿಧ ದೃಷ್ಟಿಕೋನಗಳಿಂದ ಆಲೋಚಿಸಿ ಬರೆಯುತ್ತಾರೆ. | 28.1 ಕವಿ ಸಮಯ.<br>28.2 ಕನ್ನಡದ ಕವಿ-ಕವಿತೆಗಳನ್ನು ಸವಿ<br>28.3 ಕಟ್ಟು ಕವಿತೆ | 28.1 ಶಿಕ್ಷಕರು ಹಿಂದಿನ ತರಗತಿಯ ಕವಿತೆಯೊಂದನ್ನು ರಸವತ್ತಾಗಿ ಅರ್ಥಪೂರ್ಣವಾಗಿ ವಾಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದು. ವಿದ್ಯಾರ್ಥಿಗಳು ತಮ್ಮದೇ ದೃಷ್ಟಿಕೋನದಿಂದ ಸಾರಾಂಶವನ್ನು ಬರೆಯಲು ಪ್ರೇರೇಪಿಸಿ.<br>28.2 ಪ್ರಸಿದ್ಧ ಕನ್ನಡ ಕವಿಗಳ ಕವಿತೆಗಳನ್ನು ಓದಿಸಿ ಕವಿತೆಗಳ ಸಾರ ಬರೆಸಿ.<br>28.3 ಕೊಟ್ಟಿರುವ ಸುಳುಹು ಪದಗಳನ್ನು |

| | | | | |
|---|---|---|---|---|
| | | | | ಬಳಸಿ ಕವಿತೆಯನ್ನು ರಚಿಸಲು ಪ್ರೇರೇಪಿಸಿ. |
| 29 | | ❖ ಚಿತ್ರ ನೋಡಿ ಸಂಭಾಷಣೆ ಬರೆಯುತ್ತಾರೆ. | 29.1 ಬರಹ – ವಿವಿಧ ತರಹ.<br>29.2 ನನ್ನ ಸಂಭಾಷಣೆ.<br>29.3 ನೋಡಿದ ಪಾತ್ರ ಬರೆಯೋಣ ಮಿತ್ರ | 29.1 ಮಕ್ಕಳು ಚಿತ್ರವನ್ನು ನೋಡಿ ಘಟನೆಯನ್ನು ಅರ್ಥೈಸಿಕೊಂಡು ಗುಂಪಿನಲ್ಲಿ ಚರ್ಚಿಸಿ ಸಂಭಾಷಣಾ ರೂಪದಲ್ಲಿ ಬರೆಯುವಂತೆ ತಿಳಿಸಿ.<br>29.2 ವಿದ್ಯಾರ್ಥಿಗಳು ತನ್ನ ಪೋಷಕರು / ಸ್ನೇಹಿತರು / ಗುರುಗಳೊಂದಿಗೆ ನಡೆಸುವ ಸಂಭಾಷಣೆಯನ್ನು ಬರೆಸಿ.<br>29.3 ವಿದ್ಯಾರ್ಥಿಗಳು ನೋಡಿದ ಸಿನಿಮಾ/ ನಾಟಕಗಳಲ್ಲಿನ ತಮಗಿಷ್ಟವಾದ 2-3 ಪಾತ್ರಗಳ ಬಗ್ಗೆ ಸಂಭಾಷಣೆಯನ್ನು ಬರೆಯುವಂತೆ ತಿಳಿಸಿ. |
| 30 | ವಿವಿಧ ನಮೂನೆಯ ಉಭಯ ಕುಶಲೋಪರಿ/ ವ್ಯಾವಹಾರಿಕ ಪತ್ರ ಬರೆಯುವರು. | ❖ ಕೌಟುಂಬಿಕ / ಯೋಗಕ್ಷೇಮ /ವ್ಯಾವಹಾರಿಕ ಪತ್ರವನ್ನು ಬರೆಯುತ್ತಾರೆ. | 30.1 ಪತ್ರಬರಿ- ಮುದ್ದುಮರಿ<br>30.2 ಕಛೇರಿಗೊಂದು ಪತ್ರ<br>30.3 ಚದುರಿದವೆ | 30.1 ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾದರಿ ಪತ್ರಲೇಖನವನ್ನು ಪ್ರದರ್ಶಿಸಿ, ಪತ್ರ ಬರೆಯುವ ಕ್ರಮವನ್ನು ಅರ್ಥೈಸುವುದು. ನಂತರ ವಿಷಯವೊಂದನ್ನು ನೀಡಿ ತಂದೆ / ತಾಯಿ / ಸಹೋದರ / ಸಹೋದರಿ / ಸ್ನೇಹಿತರಿಗೆ ಪತ್ರ ಬರೆಯಲು ತಿಳಿಸಿ.<br>ಉದಾ: 1) ಪರೀಕ್ಷಾ ಸಿದ್ಧತೆಯ ಬಗ್ಗೆ ನಿಮ್ಮ ತಂದೆಗೆ ಪತ್ರ ಬರೆಯಿರಿ.<br>2) ಪ್ರವಾಸಕ್ಕೆ ಅನುಮತಿ ಕೋರಿ ನಿಮ್ಮ ತಾಯಿಗೆ ಪತ್ರ ಬರೆಯಿರಿ.<br>30.2 ವ್ಯಾವಹಾರಿಕ ಪತ್ರ ಬರೆಯುವ ವಿಧಾನವನ್ನು ಅರ್ಥೈಸಿ ಕಛೇರಿಗೊಂದು ಪತ್ರ ಬರೆಸಿ.<br>30.3 ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ಮಾಡಿ ಪತ್ರದ ವಿವಿಧ ಭಾಗಗಳನ್ನು ಕೊಟ್ಟು ಕ್ರಮಬದ್ಧವಾಗಿ ಬರೆಯಿಸಿ. |